ಮುಂದೆ ಬರುವಂಥ ಅಧಿವೇಶನದಲ್ಲಿ ಏನೇ ಇದ್ದರೂ ಎರಡು ಕಡೆಯವರು ಚರ್ಚಿಸಿ ಏನು ಸಮಸ್ಯೆಗಳಿವೆ ಅವುಗಳನ್ನು ಚರ್ಚೆ ಮುಖಾಂತರ ಒಂದು ಸಹಮತದೊಂದಿಗೆ ಸದನವನ್ನು ನಡೆಸುವಂಥ ಕೆಲಸ ಆಗಬೇಕು. ಮತ್ತೆ ಎಲ್ಲಾ ವಿಚಾರಗಳ ಜೊತೆಗೆ ಸರ್ಕಾರದ ವೈಫಲ್ಯತೆಗಳು ಏನಿವೆ ಅವುಗಳನ್ನು ಹೇಳಿ ಅವುಗಳನ್ನು ತಿದ್ದಿ ಸರಿಮಾಡುವಂಥ ಕೆಲಸ ಅವರಿಂದ ಆಗಬೇಕು. ಆದ್ದರಿಂದ, ಇನ್ನು ಮುಂದೆಯಾದರು ಸಹಕಾರ ಕೊಡಬೇಕೆಂಬ ಮಾತನ್ನು ಹೇಳಿ, ನಡೆದಂಥ ಈ ಒಂದು ಕಲಾಪಕ್ಕೆ ಸಹಕರಿಸಿದಂಥ ತಮಗೆಲ್ಲರಿಗೂ ನಾನು ಅಭಿನಂದನೆಗಳನ್ನು ಹೇಳುತ್ತಿದ್ದೇನೆ. ಈಗ ಸದನವನ್ನು ಅನಿರ್ದಿಷ್ಟಕಾಲದ ಅವಧಿಯವರಿಗೆ ಮುಂದೂಡಲಾಗಿದೆ.

ಸದನವು ಸಂಜೆ 4 ಗಂಟೆ 3 ನಿಮಿಷಕ್ಕೆ ಮುಕ್ತಾಯಗೊಂಡು, ಅನಿರ್ದಿಷ್ಟಕಾಲದ ಅವಧಿಯವರೆಗೆ ಮುಂದೂಡಲಾಯಿತು.

17. ಅನುಬಂಧ – 1

ಚುಕ್ಕೆಗುರುತಿನ ಪ್ರಶ್ನೋತ್ತರ

ಬಸವ ಕಲ್ಯಾಣ ಮತಕ್ಷೇತ್ರದ ಮಿರಕಲ್ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪನೆ

44 (457): ಶ್ರೀ ಬಸವರಾಜ್ ಪಾಟೀಲ್ ಅಟ್ಟೂರು (ಬಸವಕಲ್ಯಾಣ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಸವಕಲ್ಯಾಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮಿರಕಲ್ ಗ್ರಾಮದಲ್ಲಿನ ಜನರಿಗೆ ಪ್ರಾಥಮಿಕ ಆರೋಗ್ಯ ಕೇಂದ್ರದ ಸೌಲಭ್ಯ ಇದೆಯೇ;

ಆ) ಈ ಗ್ರಾಮದ ಜನರು ತುರ್ತು ಸಂದರ್ಭಗಳಲ್ಲಿ ಆರೋಗ್ಯದ ಸಮಸ್ಯೆಗಳು ಉಂಟಾದಾಗ ಇಲ್ಲಿಂದ ದೂರದಲ್ಲಿರುವ ಬಸವಕಲ್ಯಾಣ ಅಥವಾ ಹುಲಸೂರಿಗೆ ಹೋಗುವಂತಹ ಪರಿಸ್ಥಿತಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಗ್ರಾಮದಲ್ಲಿ ಆರೋಗ್ಯ ಕೇಂದ್ರವನ್ನು ಸ್ಥಾಪಿಸುವಂತೆ ಈ ಕ್ಷೇತ್ರದ ಜನಪ್ರತಿನಿಧಿ ಹಾಗೂ ಗ್ರಾಮದ ಜನರು ಸರ್ಕಾರಕ್ಕೆ ಮನವಿ ಸಲ್ಲಿಸಿರುವುದು ನಿಜವಲ್ಲವೇ;

ಈ) ಹಾಗಿದ್ದಲ್ಲಿ, ಸರ್ಕಾರದ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದೇ; ಇಲ್ಲದೇ ಇದ್ದಲ್ಲಿ ಕಾರಣಗಳೇನು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಮತ್ತು ಆ) ಇದೆ. ಮಿರಕಲ್ ಗ್ರಾಮವು ಹುಲಸೂರು ಪ್ರಾಥಮಿಕ ಆರೋಗ್ಯ ಕೇಂದ್ರದ 8 ಕಿ.ಮೀ. ಅಂತರದಲ್ಲಿದ್ದು, ಸದರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಿರಕಲ್ ಗ್ರಾಮದ ಜನರಿಗೆ ಆರೋಗ್ಯ ಸೌಲಭ್ಯ ಒದಗಿಸಲಾಗುತ್ತದೆ.

ಇ) ಹೌದು.

ಈ) ಬಸವಕಲ್ಯಾಣ ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆ 2,40,779 ಆಗಿದ್ದು, ಮಾರ್ಗಸೂಚಿಗಳ ಪ್ರಕಾರ 8 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲು ಅವಕಾಶವಿದೆ. ಸದರಿ ತಾಲ್ಲೂಕಿನಲ್ಲಿ ಈಗಾಗಲೇ 12 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿರುವುದರಿಂದ, ಅಲ್ಲಿಗೆ ಹೆಚ್ಚಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲ.

ಮಂಡ್ಯ ತಾಲ್ಲೂಕು ತುಂಬಕೆರೆ ಗ್ರಾಮದಲ್ಲಿ ಸಬ್ ಸ್ಟೇಷನ್ ಸ್ಥಾಪಿಸುವುದು

45 (363): ಶ್ರೀ ಶ್ರೀನಿವಾಸ್. ಎಂ. (ಮಂಡ್ಯ): ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಡ್ಯ ತಾಲ್ಲೂಕು ಕಸಬಾ ಹೋಬಳಿ, ತುಂಬಕೆರೆ ಗ್ರಾಮದಲ್ಲಿ ವಿದ್ಯುತ್ ಸಬ್ ಸ್ಟೇಷನ್ ಸ್ಥಾಪಿಸಲು ಮಂಜೂರಾತಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಸಬ್ ಸ್ಟೇಷನ್ ಸ್ಥಾಪಿಸಲು ಸರ್ಕಾರ ನಿಗದಿಪಡಿಸಿರುವ ಅನುದಾನದ ಮೊತ್ತವೆಷ್ಟು;

ಇ) ಈ ಸಬ್ ಸ್ಟೇಷನ್ ಸ್ಥಾಪಿಸಲು ಸರ್ಕಾರ ಇದುವರೆಗೂ ಹಣ ಬಿಡುಗಡೆ ಮಾಡಿದೆಯೇ;

ಈ) ಇದುವರೆವಿಗೂ ಕಾಮಗಾರಿಯನ್ನು ಪ್ರಾರಂಭಿಸದಿರಲು ಕಾರಣವೇನು;